**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 2440/2024</u>**

**ಫಿರ್ಯಾದುದಾರರು** ಶ್ರೀ ಉಮೇಶ ತಂದೆಃ ಮಂಜುನಾಥ ಶಿರೂರಕರ್ ,

**– ವಿರುದ್ಧ –**

**ಆರೋಪಿತರು** ಶ್ರೀ ಉಷಾ ಕೋಂಃ ಉದಯ ಪೈ,
ವಯಸ್ಸುಃ 56 ವರ್ಷ,
ಸಾಃ ರಮೇಶ ಕೃಪಾ, ಕೆ.ಬಿ ರಸ್ತೆ,
ಕುದ್ರಿ ಬೀರಪ್ಪ ರಸ್ತೆ, ಚೌಥನಿ , ಭಟ್ಕಳ .

**<u>ಆಪಾದನೆ</u>**

ಆರೋಪಿತರಾದ ನೀವು ಮತ್ತು ಪಿರ್ಯಾದಿಯವರು ಪರಿಚಿತರಿದ್ದು, ದಿನಾಂಕ 25-05-2023 ರಂದು ರೂ. 3,00,000/-( ರೂಪಾಯಿ ಮೂರು ಲಕ್ಷ ಮಾತ್ರ) ಹಣವನ್ನು ನೀವು ನಿಮ್ಮ ಸ್ವಂತ ವ್ಯವಹಾರ ಮಾಡುವ ಉದ್ದೇಶಕ್ಕಾಗಿ ಸಾಲವನ್ನು ಪಡೆದುಕೊಂಡಿದ್ದು, ಸದ್ರಿ ಸಾಲವನ್ನು 6 ತಿಂಗಳುಗಳಲ್ಲಿ ಮರುಪಾವತಿಸುವುದಾಗಿ ಭರವಸೆ ನೀಡಿರುತ್ತೀರಿ. ನಂತರ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ದಿನಾಂಕಃ 03-08-2024 ರಂದು ನಿಮ್ಮ ಫೆಡರಲ್ ಬ್ಯಾಂಕ್, ಭಟ್ಕಳ ಶಾಖೆಯ ಚೆಕ್ ನಂಬರ್ 083684 ನ್ನು ರೂ. 3,00,000/-( ರೂಪಾಯಿ ಮೂರು ಲಕ್ಷ ಮಾತ್ರ) ಕ್ಕೆ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ. ಸದ್ರಿ ಚೆಕ್ಕನ್ನು ದಿನಾಂಕಃ 05-08-2024 ರಂದು ಫಿರ್ಯಾದಿದಾರರು ನಗದೀಕರಣಕ್ಕಾಗಿ ಅವರ ವ್ಯವಹಾರದ ಬ್ಯಾಂಕಿಗೆ ಹಾಜರುಪಡಿಸಿದಾಗ, "Insufficient funds " ಎಂಬ ಹಿಂಬರಹದೊಂದಿಗೆ ದಿನಾಂಕಃ 06-08-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 03-09-2024 ರಂದು ತಮ್ಮ ವಕೀಲರ ಮೂಲಕ ನೋಟಿಸ್ ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 04-09-2024 ರಂದು ಜ್ಯಾರಿಯಾಗಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/–

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

ದಿನಾಂಕಃ 08-04-2025.